ಧಾರವಾಡದ ಒಂದು ಪ್ರಮುಖ ಪ್ರಕಾಶನ ಸಂಸ್ಥೆ ಅನೇಕ ವರ್ಷಗಳಿಂದ ಒಂದು ಕೋಮಿನ, ಜಾತಿಯ ತಮಗೆ ಬೇಕಾಗಿದ್ದವರ ಕೃತಿಗಳನ್ನು ಮಾತ್ರ ಪ್ರಕಟಿಸುತ್ತ ಬಂದಿತ್ತು. ಅದನ್ನು ಚಂಪಾ, ಸಂಪಿಗೆ ತೋಂಟದಾರ್ಯ, ರಾಜಶೇಖರ ಕೋಟಿ ಮುಂತಾದವರು ಕೂಡಿಕೊಂಡು ಉಲ್ಲೇಖಗಳೊಂದಿಗೆ ಬಹಿರಂಗವಾಗಿ ಪ್ರತಿಭಟಿಸಿದೆವು. ಆದರೆ ಆ ಸಂಸ್ಥೆಯ ಮುಖ್ಯಸ್ಥರ ನಡವಳಿಕೆ ಮತ್ತು ಮುಂದಿನ ದಿನಗಳಲ್ಲಿ ಅವರು ಟೀಕೆಗೆ ಆಸ್ಪದವಾಗದಂತೆ ನಡೆದ ರೀತಿಗೆ ನಮ್ಮ ಪ್ರತಿರೋಧ ಅರ್ಥ ಕಳೆದುಕೊಂಡದ್ದು ಗೆಲುವು.

ಶಿಕ್ಷಣ, ಸಂಸ್ಥಾನಿರ್ವಹಣೆ, ಸಮಾಜಕಾರ್ಯ ಯಾವುದೇ ಇರಲಿ, ಕುಸ್ತೀ ಹಿಡಿಯುವುದಕ್ಕೂ ನಮಗೆ ಸಮಾನರಾದವರು ಇರಬೇಕು, ಕನಿಷ್ಠ ಪಕ್ಷ ಸಮೀಪ ಬರುವಂಥವರಾದರೂ ಇರಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಸಮಾಜದ ಎಲ್ಲ ಅಂಗಗಳಲ್ಲಿ ವ್ಯವಸ್ಥೆಯೇ ಭ್ರಷ್ಟಗೊಂಡಿರುವಾಗ, ನಮ್ಮ ಪ್ರಾಮಾಣಿಕ ನಡೆಗೆ, ನುಡಿಗೆ, ಭಾವಕ್ಕೆ ಬೆಲೆ ಇಲ್ಲದಂತಾಗಿದೆ. ಇಂಥ ಹೊತ್ತಿನಲ್ಲಿ ಅಂತಃಕರಣವಾಗಲಿ, ಅನುಭವದ ಹಿತನುಡಿಯಾಗಲಿ, ಪರಸ್ಪರ ಗೌರವದ ಗಾಂಭೀರ್ಯವಾಗಲಿ ಸಾಧ್ಯವಾಗುವುದಿಲ್ಲ.

◆ **ನಿಮ್ಮ ಸಾಹಿತ್ಯ ಬದುಕು ಆಧುನಿಕ ಕನ್ನಡ ಸಾಹಿತ್ಯದ ಎಲ್ಲ ಪಲ್ಲಟಗಳೊಂದಿಗೆ ನಡೆದುಬಂದಿದೆ. ಸಾಹಿತ್ಯಿಕ ಚಳವಳಿ–ಭಾಷಾ ಚಳವಳಿಗಳಿಗೆ ಧಾರವಾಡ ಕೇಂದ್ರಶಕ್ತಿಯಾಗಿತ್ತು ಎಂದು ಕೇಳಿದ್ದೇವೆ. ಚಂಪಾ, ಬಂಡಾಯ ಸಾಹಿತ್ಯದ ಮುಂಚೂಣಿಯ ನಾಯಕತ್ವ ವಹಿಸಿಕೊಂಡಿದ್ದರು. ನೀವು ಈ ವಿದ್ಯಮಾನಗಳಿಂದ ಒಂದು ದೂರವನ್ನು ಕಾದುಕೊಂಡಿರಾ? ನಿಮ್ಮ ತೀರ್ಮಾನಕ್ಕೆ ಕಾರಣವಾಗಿದ್ದ ತಾತ್ವಿಕತೆ ಏನಾಗಿತ್ತು?**

ಆಕಾಶವಾಣಿಯಲ್ಲಿ ಸಂಸ್ಕೃತ ಭಾಷೆಯಲ್ಲಿ ಸುದ್ದಿ ಬಿತ್ತರಣೆಯನ್ನು ಅದು ತಿಳಿದ ದಿನವೇ ವಿರೋಧಿಸಿದ್ದು ನಾನು, ಚಂಪಾ. ನಾವು ಭಾಷೆಯ ವಿರೋಧಿಗಳಾಗಿರಲಿಲ್ಲ, ಆದರೆ ಸ್ಥಳೀಯ ಸುದ್ದಿ ಸಮಯವನ್ನು ಕಡಿತಗೊಳಿಸಿದ್ದು, ಈ ಸಂದರ್ಭದಲ್ಲಿ ಸಂಸ್ಕೃತಕ್ಕೆ ಅನಗತ್ಯವಾಗಿ ಪ್ರಾಶಸ್ತ್ಯ ನೀಡಿದ್ದು ನಮಗೆ ಹಿಡಿಸಿರಲಿಲ್ಲ. ಇದು ಆಗಿನ ಕೇಂದ್ರ ಸಚಿವೆಯ ದಾಳಿಸ್ವರೂಪದ ಏಕಮುಖ ನಿರ್ಧಾರವಾಗಿತ್ತು. ಬಂಡಾಯ ಸಾಹಿತ್ಯದ ಬಗ್ಗೆ ಸಹ ಅದರಲ್ಲಿ ಹೆಡೆಯಾಡುತ್ತಿದ್ದ, ಅನಗತ್ಯವಾಗಿ ಮಿಶ್ರಗೊಂಡಿದ್ದ ವೈಚಾರಿಕ ನಿಲುವುಗಳು, ಜಾತಿವಿರೋಧಗಳು; ಕನ್ನಡ, ಕರ್ನಾಟಕಗಳನ್ನು ಒಡೆಯುವ ಕೆಲವರ ಹೇಳಿಕೆಗಳು ವೈಯಕ್ತಿಕವಾಗಿ ನನಗೆ ಇಷ್ಟವಾಗಿರಲಿಲ್ಲ. ಆ ಚಳವಳಿಯ ಮುಂಚೂಣಿಯಲ್ಲಿದ್ದ ಚಂಪಾನನ್ನೇ ಮುಂದೆ ಹೇಗೆ ನಡೆಸಿಕೊಳ್ಳಲಾಯಿತು ಎಂಬುದು ಚರಿತ್ರೆ.

ಇನ್ನು ನೀವು ಉಲ್ಲೇಖಿಸಿದ ಇತರ ಚಳವಳಿಗಳ ವಿಷಯ. ಜೆಪಿ ಚಳವಳಿಯ ಸಂದರ್ಭದಲ್ಲಿ ಕರ್ನಾಟಕದ ತುಂಬ ಸುತ್ತಾಡಿದ್ದೇನೆ. ತಾತ್ಕಾಲಿಕ ಜೇಲುವಾಸಗಳನ್ನೂ ಅನುಭವಿಸಿದ್ದೇನೆ. ಆ ಕಾಲಕ್ಕೆ ನಾನು ಕಂಡ ಕೆಲ ವ್ಯಕ್ತಿಗಳ ಪ್ರಚಾರಪ್ರಿಯತೆ, ನಿಷ್ಠೆ, ಪ್ರಾಮಾಣಿಕತೆಗಳ ಬಗ್ಗೆ, ನನಗೆ ನಂಬಿಕೆ ಉಳಿದಿರಲಿಲ್ಲ. ಭಾಷಾ ಚಳವಳಿಗಳ ಸಂದರ್ಭದಲ್ಲಿ ಧಾರವಾಡದಲ್ಲಿ ಆರಂಭದಲ್ಲಿ ಮನಸ್ಸಿನಿಂದ ಪಾಲುಗೊಳ್ಳತೊಡಗಿದ್ದೆ. ಆಗ ಶಂ.ಬಾ. ಜೋಶಿಯವರು ಮುಕ್ತವಾಗಿ ಭಾಗವಹಿಸತೊಡಗಿದಾಗ, ಬಹಿರಂಗವಾಗಿ ಅವರನ್ನು ದೂರವಿಡಲು ನಡೆದ ಹುನ್ನಾರವನ್ನು ಸ್ಪಷ್ಟವಾಗಿ ನೋಡಿದ್ದೇನೆ.

ಮುಂದಾಳತ್ವ ವಹಿಸಿ ರಾಜಕೀಯ ಲಾಭ, ಪ್ರಚಾರ ಅಥವಾ ಬೇರೆ ಯಾವುದಾದರೂ ತಾತ್ಕಾಲಿಕ ಕೀರ್ತಿ ಪಡೆಯುವುದು ನನಗೆ ಬೇಕಿರಲಿಲ್ಲ. ಭಾಷಾ ಚಳವಳಿಗೆ ತಾತ್ವಿಕ ನಿಲುವು ಕೊಟ್ಟು, ಒಂದು ವೇದಿಕೆಯಲ್ಲಿ ಜನತೆಯನ್ನು ಸಂಘಟಿಸಿದ್ದ ಶಂ.ಬಾ. ಜೋಶಿ ಅವರ ಹೆಸರನ್ನು, ಮುಂದೆ ಕೆಲವೇ ದಿನಗಳಲ್ಲಿ ಎಲ್ಲಿಯೂ ಕೇಳಬಾರದ ಹಾಗೆ ಮಾಡಿದವರು ಯಾರು? ನಂತರದ ದಿನಗಳಲ್ಲಿ